# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 491 |
| ಸದಸ್ಯರ ಹೆಸರು | : | ಶ್ರೀ ಅ. ದೇವೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 13.12.2018 |
| ಉತ್ತರಿಸುವವರು | : | ಮಾನ್ಯ ಮುಖ್ಯಮಂತ್ರಿಗಳು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಸರ್ಕಾರಿ ಕಛೇರಿಗಳಲ್ಲಿ ಮರ, ಕಬ್ಬಿಣ ಮತ್ತು ಪ್ಲಾಸ್ಟಿಕ್ ಅನುಪಯುಕ್ತ ಪೀಠೋಪಕರಣಗಳನ್ನು ಒಂದೆಡೆ ರಾಶಿ ಹಾಕಿ ಕಛೇರಿ ನೈರ್ಮಲ್ಯವನ್ನು ಹಾಳುಗೆಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು |
| (ಆ) | ಸರ್ಕಾರಿ ಕಛೇರಿಗಳಲ್ಲಿ ಈವರೆವಿಗೆ ಒದಗಿಸಲಾಗಿದ್ದ ಮರದ ಪೀಠೋಪಕರಣಗಳ ಲೆಕ್ಕ ಇಡಲಾಗಿದೆಯೇ; | ಹೌದು<br>ಪ್ರತಿ ಸರ್ಕಾರಿ ಕಛೇರಿಗಳಲ್ಲಿ ಪೀಠೋಪಕರಣಗಳನ್ನು ದಾಸ್ತಾನು ಪುಸ್ತಕದಲ್ಲಿ ನಿರ್ವಹಣೆ ಮಾಡುವ ಮೂಲಕ ಆಯಾಯ ಕಛೇರಿಗಳಲ್ಲಿ ನಿಯಮಾನುಸಾರ ಲೆಕ್ಕ ಇಡಲಾಗುತ್ತಿದೆ. |
| (ಇ) | ಈ ಮರದ ಪೀಠೋಪಕರಣ-ಗಳನ್ನು ರಿಪೇರಿ ಮಾಡಿಸಿ, ಮರುಬಳಕೆ ಮಾಡುವುದರಿಂದ ಅನಗತ್ಯ ವೆಚ್ಚ ತಪ್ಪಿಸಬಹುದಲ್ಲವೆ; | ಹೌದು<br>ಸಚಿವಾಲಯದ ವಿಕಾಸಸೌಧದ ತಳಮಹಡಿಯಲ್ಲಿರುವ ಹಳೆಯ ಮರದ ಕುರ್ಚಿಗಳು, ಸೋಫಾಗಳು ಹಾಗೂ ಕಂಪ್ಯೂಟರ್ ಟೇಬಲ್‌ಗಳನ್ನು ಮತ್ತು ಇನ್ನಿತರ ಹಳೆಯ ಉಪಕರಣಗಳನ್ನು ಶಿಕ್ಷಣ, ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯ ಕರ್ನಾಟಕ ರೆಸಿಡೆಷಿಯಲ್ ಎಜುಕೇಷನ್ ಇನ್ಸ್ಟ್ಯೂಷನ್ ಸೊಸೈಟಿ (ಕೆಆರ್‌ಇಐಎಸ್), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಕಂದಾಯ ಇಲಾಖೆಗಳಿಗೆ ನೀಡುವ ಮೂಲಕ ಸದರಿ ಇಲಾಖೆಗಳು ರಿಪೇರಿ ಮಾಡಿಸಿ, ಮರು ಬಳಕೆ ಮಾಡಲು ಕ್ರಮವಹಿಸಲಾಗಿದೆ. ಅಲ್ಲದೆ, ಸಂಖ್ಯೆ: ಸಿಆಸುಇ 42 ಡಿಎಸ್‌ವೈ 2018, ದಿನಾಂಕ:12.10.2018ರ ಸುತ್ತೋಲೆಯಲ್ಲಿ ಕರ್ನಾಟಕ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಹಳೆಯ ಜೆರಾಕ್ಸ್ ಯಂತ್ರಗಳು, ಕಂಪ್ಯೂಟರ್ ಹಾಗೂ ಪ್ರಿಂಟರ್‌ಗಳು, ಇನ್ನಿತರ ವಸ್ತುಗಳನ್ನು ದುರಸ್ಥಿಪಡಿಸಿ ಮರುಬಳಸುವುದು ಅಥವಾ ಅವುಗಳ ಉಪಯುಕ್ತ ಮೌಲ್ಯ ಮತ್ತು ಬಾಳಿಕೆ ಹಾಗೂ ಇನ್ನಿತರ ತಾಂತ್ರಿಕ ಅಂಶಗಳನ್ನು ಪರಿಶೀಲಿಸಿಕೊಂಡು ಹಾಲಿ ಉಪಯೋಗಿಸುತ್ತಿದ್ದ ಹಳೆಯ ವಸ್ತುಗಳನ್ನು ಸರಬರಾಜುದಾರರಿಗೆ ಹಿಂತಿರುಗಿಸಿ **Buy-Back** ಅಥವಾ **Exchange** ಆಧಾರದಲ್ಲಿ ಹೊಸ ವಸ್ತುಗಳನ್ನು ಖರೀದಿಸಲು ಎಲ್ಲಾ ಸರ್ಕಾರದ ಕಛೇರಿಗಳಿಗೆ ತಿಳಿಸಲಾಗಿರುತ್ತದೆ. |
| (ಈ) | ಈ ಬಗ್ಗೆ ಸರ್ಕಾರ ಗಮನಹರಿಸುವುದೆ? | |

ಸಂಖ್ಯೆ: ಸಿಆಸುಇ 129 ಡಿಎಫ್‌ಆರ್ 2018

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ